ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

(ಅ) ಬೆಳ್ತಂಗಡಿ ತಾಲ್ಲೂಕು ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದ್ದು ಕಟ್ಟಡ ಕಾಮಗಾರಿಯನ್ನು 2006–2007ನೇ ಸಾಲಿನಲ್ಲಿ ಕೈಗೊಳ್ಳಲು ಕ್ರಮ ವಹಿಸಲಾಗಿದೆ ಕಾಮಗಾರಿ ಪೂರ್ಣಗೊಂಡ ನಂತರ ಈಗಾಗಲೇ ಮಂಜೂರಾಗಿರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು

(ಆ) ಆದ್ಯತೆ ಮೇರೆಗೆ ಮೂಲ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

664 (636) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) – ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಬೆಳ್ತಂಗಡಿ ತಾಲ್ಲೂಕು ಮಾಲಾಡಿ ಎಂಬಲ್ಲಿರುವ ಐಟಿಐ ಸಂಸ್ಥೆಗೆ ಸ್ವಂತ ಕಟ್ಟಡ ನಿರ್ಮಾಣದ ಬಗೆಗಿನ ವಿವರಗಳೇನು ,

(ಆ) 2006–07 ಮತ್ತು 2007–08ನೇ ಸಾಲಿನಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ , ಕಟ್ಟಡ ನಿರ್ಮಾಣಕ್ಕಾಗಿ ನಿಗಧಿಪಡಿಸಲಾದ ಅಂದಾಜು ಮೊತ್ತ ಎಷ್ಟು ,

(ಇ) ಕಟ್ಟಡ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? ಹಾಗೂ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಲಾದ ಕಾಲಮಿತಿ ಎಷ್ಟು ? (ವಿವರ ಒದಗಿಸುವುದು)

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) –

(ಅ) ಕಟ್ಟಡದ ನಕ್ಷೆ ಅನುಮೋದನೆಯಾಗಿರುತ್ತದೆ ಅಂದಾಜು ಪಟ್ಟಿ ತಯಾರಿಸಲಾಗಿದೆ

(ಆ) ಈ ಸಂಸ್ಥೆಗೆ ಬಿಡುಗಡೆ ಮಾಡಲಾಗಿಲ್ಲ

ರೂ 370 00 ಲಕ್ಷ

(ಇ) ಹೆಚ್ಚಿನ ಆಯವ್ಯಯ ದೊರೆತ ತಕ್ಷಣ ಕಾಮಗಾರಿ ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು

667 (814) ಶ್ರೀ ರಮೇಶ್‌ಕುಮಾರ್ ಕೆ ಆರ್ (ಶ್ರೀನಿವಾಸಪುರ) – ಮಾನ್ಯ ಪಶುಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಕುರಿ ಸಾಕಾಣಿಕೆಗೆ ಯಾವುದಾದರೂ ವಿಶೇಷ ಕಾರ್ಯಕ್ರಮವನ್ನು ಕೈಗೊಂಡಿದೆಯೆ ,

(ಆ) ಕುರಿ ಸಾಕಾಣಿಕೆಗೆ ವಿಮಾ ಯೋಜನೆ ಜಾರಿಯಲ್ಲಿದೆಯೇ ,

(ಇ) ಪರಿಷ್ಕರಿಸಿದ ಕುರಿ ಮಾಂಸವನ್ನು ಹೊರ ರಾಷ್ಟ್ರಗಳಿಗೆ ರಫ್ತು ಮಾಡುವ ಉದ್ದೇಶದಿಂದ ಯಾಂತ್ರೀಕೃತ ಕಸಾಯಿಖಾನೆಗಳನ್ನು ಸ್ಥಾಪಿಸಲಾಗಿದೆಯೆ,

(ಈ) ಉಣ್ಣೆ ಮತ್ತು ಹೆಚ್ಚು ಮಾಂಸವನ್ನು ಲಾಭದಾಯಕವಾಗಿ ಪಡೆಯಲು ಯಾವುದಾದರೂ ವಿಶೇಷ ತಳಿಗಳನ್ನು ಸಹಾಯಧನದ ರೂಪದಲ್ಲಿ ರೈತರಿಗೆ ಒದಗಿಸುವ ಯೋಜನೆ ಸರ್ಕಾರದ ಮುಂದಿದೆಯೇ ?

ಶ್ರೀ ರೇವೂನಾಯಕ ಬೆಳಮಗಿ (ಪಶುಸಂಗೋಪನಾ ಸಚಿವರು) –

(ಅ) 1) ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಅಂಚಿನ ಹಣದ ಯೋಜನೆಯನ್ನು ಕುರಿ ಸಾಕಾಣಿಕೆಗಾಗಿ ಅನುಷ್ಠಾನಗೊಳಿಸುತ್ತಿದೆ

2) ಪ್ರಸಕ್ತ ಸಾಲಿನಲ್ಲಿ ಕುರಿ ಸಾಕಾಣಿಕೆಗಾಗಿ 10+1 ಕುರಿ ಘಟಕಗಳನ್ನು ಶೇಕಡ 25 ಸಹಾಯಧನದೊಂದಿಗೆ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಮುಖಾಂತರ ವಿತರಿಸಲು ಉದ್ದೇಶಿಸಲಾಗಿದೆ

3) ಕುರಿಗಳ ಆರೋಗ್ಯ ರಕ್ಷಣೆ ಕಾರ್ಯಕ್ರಮದಡಿಯಲ್ಲಿ ರಾಜ್ಯಾದ್ಯಂತ ಕುರಿಗಳಿಗೆ ಜಂತುನಾಶಕ ಔಷಧಿ ಪೂರೈಸಲಾಗುತ್ತಿದ್ದು, ಇದರಿಂದ ಕುರಿಗಳಲ್ಲಿ ಮರಣ ಪ್ರಮಾಣ ಕಡಿಮೆಯಾಗಿ ಉತ್ಪಾದನೆ ಹೆಚ್ಚಾಗುತ್ತಿದೆ

4) ರೋಗೋದ್ರೇಕ ಸಂದರ್ಭಗಳಲ್ಲಿ ಜೀವ ರಕ್ಷಕ ಔಷಧಿಗಳನ್ನು ಪೂರೈಸಲು ಉದ್ದೇಶಿಸಲಾಗಿದೆ

5) ಕುರಿ ಸಾಕಾಣಿಕೆದಾರರಿಗೆ ಕುರಿ ಸಂಗೋಪನೆಯಲ್ಲಿ ವೈಜ್ಞಾನಿಕ ತರಬೇತಿಯನ್ನು ನಿಗಮದ ಕುರಿ ಸಂವರ್ಧನಾ ಕೇಂದ್ರಗಳಲ್ಲಿ ನೀಡಲಾಗುತ್ತಿದೆ

6) ಅಲ್ಲದೇ ಪ್ರಸಕ್ತ ಸಾಲಿನಲ್ಲಿ 10+1 ಕುರಿ ಘಟಕಗಳನ್ನು ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿ ಸ್ತ್ರೀ ಶಕ್ತಿ ಸಂಘಗಳಿಗೆ ಒದಗಿಸಲು ಉದ್ದೇಶಿಸಲಾಗಿದೆ

(ಆ) 2006–07ನೇ ಸಾಲಿನಿಂದ ಕುರಿ ಸಾಕಾಣಿಕೆಗೆ ವಿಮಾ ಯೋಜನೆ ಜಾರಿಗೊಳಿಸಲಾಗಿದೆ

(ಇ) ಯಾಂತ್ರೀಕೃತ ಆಧುನಿಕ ಕಸಾಯಿಖಾನೆಗಳನ್ನು ರಾಜ್ಯದಲ್ಲಿ ಇನ್ನೂ ಸ್ಥಾಪಿಸಲಾಗಿಲ್ಲ

(ಈ) ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ವತಿಯ ಕುರಿ ಸಂವರ್ಧನಾ ಕೇಂದ್ರಗಳಿಂದ ರಿಯಾಯ್ತಿ ದರದಲ್ಲಿ ವಿದೇಶಿ ಮಿಶ್ರ ತಳಿ ರ್ಯಾಂಬುಲೆ ಟಗರುಗಳನ್ನು ಹಾಗೂ ಬಂಡೂರು ತಳಿ ಟಗರುಗಳನ್ನು ತಳಿ ಅಬಿವೃದ್ಧಿಗಾಗಿ ರಿಯಾಯ್ತಿ ದರದಲ್ಲಿ ಒದಗಿಸಲಾಗುತ್ತಿದೆ

ಅಲ್ಲದೇ ಕೇಂದ್ರೀಯ ಉಣ್ಣೆ ಅಭಿವೃದ್ಧಿ ಮಂಡಳಿ, ಜೋಧ್‌ಪುರ ವತಿಯಿಂದ ಹಮ್ಮಿಕೊಳ್ಳಲಿರುವ ಸಮಗ್ರ ಉಣ್ಣೆ ಅಭಿವೃದ್ಧಿ ಯೋಜನೆಯಡಿ ಕುರಿಗಾರರಿಗೆ ವಿದೇಶಿ ರ್ಯಾಂಬುಲೆ ಮಿಶ್ರತಳಿ ಟಗರುಗಳನ್ನು ತಳಿ ಅಭಿವೃದ್ಧಿಗಾಗಿ ಉಚಿತವಾಗಿ ವಿತರಿಸಲಾಗುತ್ತಿದೆ

668 (815) ಶ್ರೀ ರಮೇಶ್ ಕುಮಾರ್ ಕೆ ಆರ್ (ಶ್ರೀನಿವಾಸಪುರ) – ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಹಂದಿ ಸಾಕಾಣಿಕೆಗೆ ಸರ್ಕಾರ ಯಾವುದಾದರೂ ವಿಶೇಷ ಯೋಜನೆಯನ್ನು ಕೈಗೊಂಡಿದೆಯೆ ,

(ಆ) ಉನ್ನತ ಗುಣಮಟ್ಟದ ಹಂದಿ ಮಾಂಸಕ್ಕೆ ವಿದೇಶಗಳಲ್ಲಿ ಭಾರಿ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ,

(ಇ) ಹಾಗಿದ್ದಲ್ಲಿ, ಇಂತಹ ಅವಕಾಶವನ್ನು ರೈತರ ಕಲ್ಯಾಣಕ್ಕಾಗಿ ಉಪಯೋಗಿಸುವ ಉದ್ದೇಶ ರಾಜ್ಯ ಸರ್ಕಾರದ ಮುಂದೆ ಇದಯೆ ?

ಶ್ರೀ ದೇವೂನಾಯಕ ಬೆಳಮಗಿ (ಪಶುಸಂಗೋಪನಾ ಸಚಿವರು) –

(ಅ) ರಾಜ್ಯದಲ್ಲಿ ಹಂದಿ ಸಾಕಾಣಿಕೆಗೆ ಯಾವುದೇ ವಿಶೇಷ ಯೋಜನೆಯನ್ನು ಸರ್ಕಾರ ಕೈಗೊಂಡಿರುವುದಿಲ್ಲ

(ಆ) ಉನ್ನತ ಗುಣಮಟ್ಟದ ಹಂದಿ ಮಾಂಸಕ್ಕೆ ವಿದೇಶಗಳಲ್ಲಿ ಭಾರಿ ಬೇಡಿಕೆ ಇದ್ದರೂ ಸಹ, ಪ್ರಸ್ತುತ ರಾಜ್ಯದಲ್ಲಿರುವ ಹಂದಿ ತಳಿಗಳು ಹೆಚ್ಚಾಗಿ ಸ್ಥಳೀಯ ತಳಿಗಳಾಗಿರುವುದರಿಂದ ರಫ್ತಿಗೆ ಯೋಗ್ಯದಾಯಕ ಆಗಿರುವುದಿಲ್ಲ ಮತ್ತು ವಿದೇಶಗಳಿಂದ ಹಂದಿ ಮಾಂಸದ ರಫ್ತಿಗೆ ಯಾವುದೇ ಬೇಡಿಕೆ ಸಹ ಬಂದಿರುವುದಿಲ್ಲ

(ಇ) ಈ ಹಂದಿ ಮಾಂಸಕ್ಕೆ ಬೇರೆ ದೇಶಗಳಿಂದ ಬೇಡಿಕೆ ಬಂದಲ್ಲಿ ಉನ್ನತ ಗುಣಮಟ್ಟದ ಹಂದಿ ಮಂಸದ ಉತ್ಪಾದನೆಗಾಗಿ ಕ್ರಮವಹಿಸಲಾಗುವುದು ಆದರೆ ಈಗಾಗಲೇ ರೈತರ ಉಪಯೋಗಕ್ಕಾಗಿ ರಾಜ್ಯದಲ್ಲಿ ಉನ್ನತ ಗುಣಮಟ್ಟದ ಹಂದಿ ಸಂವರ್ಧನೆಗಾಗಿ, ಇಲಾಖೆಯ 3 ಹಂದಿ ತಳಿ ಸಂವರ್ಧನಾ ಕೇಂದ್ರಗಳಿಂದ ಗುಣಮಟ್ಟದ ಹಂದಿ ಮರಿಗಳನ್ನು ಉತ್ಪಾದಿಸಿ ಆಸಕ್ತ ರೈತರಿಗೆ ಈ ಕೆಳಕಂಡ ಯೋಜನೆಗಳಲ್ಲಿ ವಿತರಿಸಲಾಗುತ್ತಿದೆ

1 ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆ

2 ಟಗರು ಮತ್ತು ಹಂದಿ ವಿತರಣಾ ಯೋಜನೆ

3 ಸ್ವರ್ಣ ಜಯಂತಿ ಗ್ರಾಮ ಸ್ವರಾಜ್ ರೋಜಗಾರ್ ಯೋಜನೆ

4 ಸ್ತ್ರೀ ಶಕ್ತಿ ಗುಂಪುಗಳಿಗೆ,